# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560056

ಸಂಖ್ಯೆ: ಎಸಿಎ-2/ಗೃ.ವಿ./ವಿಷಯ/DSC/2022-23

ದಿನಾಂಕ: 17.05.2022

## ಅಧಿಸೂಚನೆ

**ವಿಷಯ:** ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ರಡಿ **"ಗೃಹ ವಿಜ್ಞಾನ" (Home Science)** ಕೋರ್ಸನ್ನು ಒಂದು Discipline Core ವಿಷಯವನ್ನಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಬಗ್ಗೆ.

ಉಲ್ಲೇಖ:
1. ದಿನಾಂಕ 03.09.2021ರ ಟಿಪ್ಪಣಿಯೊಡನೆ ಮಾನ್ಯ ಉನ್ನತ ಶಿಕ್ಷಣ ಮತ್ತು IT & BT ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಆಪ್ತಕಾರ್ಯದರ್ಶಿಯವರು ಕಳುಹಿಸಿಕೊಟ್ಟಿರುವ ಅಧ್ಯಕ್ಷರು, ಭಾರತೀಯ ಗೃಹ ವಿಜ್ಞಾನ ಸಂಘ, ಕರ್ನಾಟಕ ಶಾಖೆ ಇವರ ಪತ್ರದ ದಿನಾಂಕ: 02.09.2021.
2. ದಿನಾಂಕ 21.04.2022ರಂದು ನಡೆದ ಶೈಕ್ಷಣಿಕ ಪರಿಷತ್ತಿನ ನಿರ್ಣಯ
3. ಕುಲಪತಿಯವರ ಅನುಮೋದನೆ ದಿನಾಂಕ: 13.05.2022.

*****

ದಿನಾಂಕ 21.04.2022ರಂದು ಜರುಗಿದ ಬೆಂಗಳೂರು ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿನ ಸಭೆಯ ನಿರ್ಣಯದಂತೆ **"ಗೃಹ ವಿಜ್ಞಾನ" (Home Science)** ಕೋರ್ಸನ್ನು ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ರ ವಿನಿಯಮಗಳನುಸಾರ, 2022-23ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಒಂದು **Discipline Core Subject (DSC)** ವಿಷಯವನ್ನಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾಗಿದೆ. ಸದರಿ ವಿಷಯದ ಮೊದಲ ಮತ್ತು ಎರಡನೇ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದಾಗಿದೆ.

ಮುಂದುವರೆದು, ಸದರಿ ಗೃಹ ವಿಜ್ಞಾನ ವಿಷಯವನ್ನು ಸ್ನಾತಕ ಪದವಿಗಳಲ್ಲಿ Discipline Core Subject (DSC) ವಿಷಯವನ್ನಾಗಿ ಪ್ರಾರಂಭಿಸಲು ಇಚ್ಛಿಸುವ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, 2022-23ನೇ ಶೈಕ್ಷಣಿಕ ಸಾಲಿನಿಂದ ಅರ್ಜಿಗಳನ್ನು ಸಲ್ಲಿಸಿ ಸಂಯೋಜನೆಯನ್ನು ಪಡೆದುಕೊಳ್ಳಲು ತಿಳಿಸಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು

ಗೆ,

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಗಳು:

1. ಎಲ್ಲಾ ನಿಕಾಯಗಳ ಡೀನರುಗಳಿಗೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಮಾನ್ಯ ಉನ್ನತ ಶಿಕ್ಷಣ ಮತ್ತು IT & BT ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಆಪ್ತಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560001.
4. ಉಪ ಕುಲಸಚಿವರು, ವಿದ್ಯಾಶಾಖೆ-1 ಮತ್ತು 3, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
5. ಅಧ್ಯಕ್ಷರು, ಭಾರತೀಯ ಗೃಹ ವಿಜ್ಞಾನ ಸಂಘ, ಕರ್ನಾಟಕ ಶಾಖೆ, ಶ್ರೀಮತಿ ವಿ.ಹೆಚ್.ಡಿ.ಕೇಂದ್ರೀಯ ಗೃಹವಿಜ್ಞಾನ ಕಾಲೇಜು, ಬೆಂಗಳೂರು-560001
6. ಸಿಸ್ಟಂ ಅನಾಲಿಸ್ಟ್, E-Governance ಕೋಶ - ಅಧಿಸೂಚನೆಯನ್ನು ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ
7. ಕುಲಪತಿಯವರು/ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಯವರು-ಇವರುಗಳ ಆಪ್ತಕಾರ್ಯದರ್ಶಿಗಳಿಗೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
8. ಕಛೇರಿ/ಹೆಚ್ಚುವರಿ ಪ್ರತಿಗಳು.